ನಿ - 330
ಕ್ರ - 40 - ಕ್ರಂ...

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ರವರು ನಿಯಮ-330 ರಡಿಯಲ್ಲಿ ನೀಡಿರುವ ಸೂಚನಾ ಪತ್ರಕ್ಕೆ ಉತ್ತರಿಸುವ ಕುರಿತು

**ವಿಷಯ**

ರಾಜ್ಯ ಪಠ್ಯಕ್ರಮದಡಿಯಲ್ಲಿ ಹಲವು ವರ್ಷಗಳಿಂದ ಶಾಲೆಗಳನ್ನು ಪ್ರಾರಂಭಿಸಿರುವ ಕೆಲವು ಶಿಕ್ಷಣ ಸಂಸ್ಥೆಗಳು ಹಾಗೂ ಹೊಸದಾಗಿ ಸಿ.ಬಿ.ಎಸ್.ಇ. ಪಠ್ಯಕ್ರಮ ಪ್ರಾರಂಭಿಸಲು (ಸಂಯೋಜನೆಗಾಗಿ) 2022-23 ಹಾಗೂ 2023-24ನೇ ಶೈಕ್ಷಣಿಕ ಸಾಲಿಗೆ ಸಿ.ಬಿ.ಎಸ್.ಇ. ಪಠ್ಯಕ್ರಮಗಳನ್ನು ಪ್ರಾರಂಭಿಸಲು ರಾಜ್ಯ ಸರ್ಕಾರದಿಂದ ನಿರಾಕ್ಷೇಪಣ ಪತ್ರ (ಎನ್.ಒ.ಸಿ) ಪಡೆದು, ಸಿ.ಬಿ.ಎಸ್.ಇ. ಪಠ್ಯಕ್ರಮಕ್ಕಾಗಿ ಸಿ.ಬಿ.ಎಸ್.ಇ. ಮಂಡಳಿಗೆ ಅನುಮತಿಗಾಗಿ ಅರ್ಜಿಗಳನ್ನು ಸಲ್ಲಿಸಿರುತ್ತಾರೆ. ಸಿ.ಬಿ.ಎಸ್.ಇ. ಮಂಡಳಿ ಸಹ ಅರ್ಜಿ ಸಲ್ಲಿಸಿದ ಶೈಕ್ಷಣಿಕ ಸಂಸ್ಥೆಗಳಿಗೆ ಮಂಡಳಿಯಿಂದ ಪರಿವೀಕ್ಷಣಾ ಸಮಿತಿ (ಇನ್ಸ್‌ಪೆಕ್ಷನ್ ಕಮಿಟಿ) ರಚಿಸಿ, ಕಳುಹಿಸಿರುತ್ತದೆ ಹಾಗೂ ಸದರಿ ಸಮಿತಿಗಳು ಪರಿವೀಕ್ಷಣಾ ವರದಿಗಳನ್ನು ಮಂಡಳಿಗೆ ಸಲ್ಲಿಸಿರುತ್ತದೆ. ಆದರೆ ರಾಜ್ಯದ ಯಾವ ಸಂಸ್ಥೆಗೂ ಸಿ.ಬಿ.ಎಸ್.ಇ. ಸಂಯೋಜನೆ ನೀಡುವ ವಿಷಯದಲ್ಲಿ ಇದುವರೆವಿಗೂ ಮಂಡಳಿಯು ಯಾವುದೇ ನಿರ್ಧಾರ ತೆಗೆದುಕೊಳ್ಳದೆ ಇರುವುದರಿಂದ ಶಿಕ್ಷಣ ಸಂಸ್ಥೆಗಳು ಆತಂಕಕ್ಕೆ ಒಳಗಾಗಿರುವ ಗಂಭೀರ ಸಮಸ್ಯೆ ಕುರಿತು

**ಉತ್ತರ**

ರಾಜ್ಯ ಪಠ್ಯಕ್ರಮ ಅನುಸರಿಸುವ ಶಾಲೆಗಳು ಸಿ.ಬಿ.ಎಸ್.ಇ., ಐ.ಸಿ.ಎಸ್.ಇ. ನಂತಹ ಶಿಕ್ಷಣ ಮಂಡಳಿಗಳಿಗೆ ಸಂಯೋಜನೆ ಬಯಸಿದಲ್ಲಿ ನಿಯಮಾನುಸಾರ ರಾಜ್ಯ ಸರ್ಕಾರದಿಂದ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ನೀಡಲಾಗುತ್ತದೆ. ಈ ರೀತಿ ನಿರಾಕ್ಷೇಪಣಾ ಪ್ರಮಾಣ ಪತ್ರಗಳನ್ನು ಪಡೆದ ಶಾಲೆಗಳಿಗೆ ಸಂಬಂಧಿಸಿದ ಶಿಕ್ಷಣ ಮಂಡಳಿಗಳು ಅಗತ್ಯ ಸಂಯೋಜನೆ ನೀಡಲು ಕ್ರಮವಹಿಸುತ್ತವೆ. ಈ ವಿಷಯದಲ್ಲಿ ರಾಜ್ಯ ಸರ್ಕಾರದ ಪಾತ್ರ ಇರುವುದಿಲ್ಲ.

ಸಂಖ್ಯೆ: ಇಪಿ 489 ಪಿಜಿಸಿ 2022

(ಬಿ.ಸಿ. ನಾಗೇಶ್)
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ
ಸಕಾಲ ಸಚಿವರು